ಕೆಲಸ ಮಾಡಿದ್ದಿರಬಹುದು ಮತ್ತು ಹೊಸಹೊಳಹುಗಳನ್ನು ಮೂಡಿಸಿದ್ದಿರಬಹುದು. ಆದರೆ ವಿಮರ್ಶೆಯನ್ನು ತೀರಾ ಗಂಭೀರವಾಗಿ ಪರಿಗಣಿಸುವುದು ನನ್ನ ಜಾಯಮಾನವಲ್ಲ. ನನ್ನ ಅನುಭವದ ಪರಿಮಿತಿಯಲ್ಲಿ ನನಗೆ ಸಾಧ್ಯವಾದುದನ್ನಷ್ಟೇ ನಾನು ಬರೆಯಬಲ್ಲೆ ಎನ್ನುವ ಸ್ಪಷ್ಟ ಅರಿವು ನನಗಿರುವುದರಿಂದ ವಸ್ತುವಿನ ಆಯ್ಕೆ, ಪರಿಸರ ಇತ್ಯಾದಿಗಳ ಕುರಿತು ನಾನು ಗೆರೆ ಮೀರಲು ಹೋಗುವುದಿಲ್ಲ. ನನ್ನ ಅನುಭವಕ್ಕೆ ದಕ್ಕಿರುವುದನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಗೊಳಿಸುವುದಷ್ಟೇ ನನ್ನ ಉದ್ದೇಶವಾಗಿರುತ್ತದೆ. ಯಾವುದೇ ವಸ್ತುವನ್ನು ಸಾಹಿತ್ಯದ ಯಾವ ಪ್ರಕಾರಕ್ಕೆ ಬಳಸಿಕೊಂಡರೆ ಸೂಕ್ತವಾಗುತ್ತದೆ ಎನ್ನುವುದನ್ನು ಅನುಭವ ತನ್ನಷ್ಟಕ್ಕೆ ಕಲಿಸಿಕೊಡುವುದರಿಂದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾನು ಬರೆದಿದ್ದೇನೆ. ಆದರೆ ಹೆಚ್ಚು ಸಮಯಾವಕಾಶವನ್ನು ಅಪೇಕ್ಷಿಸದ ಸಣ್ಣಕತೆಗಳ ಪ್ರಕಾರ ನನಗೆ ಯಾವತ್ತೂ ಪ್ರಿಯ. ಯಾಕೆಂದು ಗೊತ್ತಿಲ್ಲ, ಬರೆದ ಕತೆಯನ್ನು ಪತ್ರಿಕೆಯೊಂದಕ್ಕೆ ಕಳಿಸಿ ಅದು ಪ್ರಕಟವಾದ ನಂತರ ಮತ್ತೊಮ್ಮೆ ಓದಲು ನನಗೆ ಮುಜುಗರ. ಹಿಂಜರಿಕೆ. ಓದುಗರಿಂದ ಮೆಚ್ಚುಗೆಯ ಪ್ರತಿಕ್ರಿಯೆ ಬಂದರೆ ಸಹಜವಾಗಿ ಸಂತೋಷ. 'ನಾನು ಬರೆದುದೆಲ್ಲಾ ಉತ್ಕೃಷ್ಟ' ಎನ್ನುವ ಮೇಲರಿಮೆ ಖಂಡಿತಾ ನನಗಿಲ್ಲ. ಯಾವುದೋ ಕೌಟುಂಬಿಕ ಕಾರಣದಿಂದ ಕೆಲ ತಿಂಗಳು ಬರೆಯಲು ಸಾಧ್ಯವಾಗದಿದ್ದರೆ 'ಇನ್ನು ಮುಂದೆ ಬರೆಯಲು ಸಾಧ್ಯವಿಲ್ಲವೇನೋ...' ಎನ್ನುವ ತಳಮಳ ನನ್ನನ್ನು ಕಾಡುತ್ತದೆ. ನನ್ನ ಮಟ್ಟಿಗೆ ಬರವಣಿಗೆ ಅನ್ನುವುದು ನಿರಂತರತೆಯನ್ನು ಅಪೇಕ್ಷಿಸುವುದರಿಂದ ಕಾಳಿನ ಜೊತೆ ಜೊಳ್ಳು ಬರುವ ಸಂಭವವನ್ನು ನಾನು ಅಲ್ಲಗಳೆಯುವುದಿಲ್ಲ. ಬರೆಯಲು ನನಗೆ ಬಿಡುವು ಬೇಕೇ ವಿನಾ ಸ್ಫೂರ್ತಿಯಲ್ಲ. ಒಮ್ಮೆ ಬರೆದಾದ ನಂತರ 'ಇದನ್ನು ಬೇರೆ ರೀತಿಯಲ್ಲಿ ಬರೆಯಬಹುದಿತ್ತು' ಎನ್ನುವ ಅನಿಸಿಕೆ ನನ್ನನ್ನು ಕಾಡುವುದಿಲ್ಲ. ಬರೆದ ಮೇಲೆ ಕತೆಯೊಂದಿಗಿನ ನನ್ನ ಸಂಬಂಧ ಕಡಿದುಕೊಂಡ ಲೆಕ್ಕ. ಕನ್ನಡದ ವಿಸ್ತೃತ ಕಥಾಪರಂಪರೆಯಲ್ಲಿ ನನ್ನ ಕತೆಗಳು ಯಾವ ಸ್ಥಾನದಲ್ಲಿ ನಿಲ್ಲಬಹುದು ಎನ್ನುವುದು ಕಾಲಕ್ಕೆ ಬಿಟ್ಟ ವಿಚಾರವಾದರೂ ಹಿಂದೊಂದು ಕಾಲದಲ್ಲಿ ಮಲೆನಾಡಿನ ಹಳ್ಳಿಗಳ ಭಾಷಾಪ್ರಯೋಗ, ನಂಬಿಕೆಗಳು, ಆಚಾರವಿಚಾರಗಳು, ಜನಜೀವನ ಹೇಗಿತ್ತು ಅನ್ನುವುದರ ಕುರಿತು ಒಂದು ಸೂಕ್ಷ್ಮ ಒಳನೋಟ ನನ್ನ ಕತೆಗಳಿಂದ ದಕ್ಕಬಹುದು ಎಂದು ನನ್ನ ತಿಳಿವಳಿಕೆ, ಆ ಕುರಿತಾದ ಕುತೂಹಲಿಗಳಿದ್ದರೆ. ಭಿನ್ನ ಅನುಭವ, ವಸ್ತು, ನಿರ್ವಹಣೆಯಲ್ಲಿ ಈ ಕಾಲದ ಕತೆಗಳು ಹಿಂದೆ ಬಿದ್ದಿಲ್ಲ ಎನ್ನುವುದು ನನ್ನ ಅನಿಸಿಕೆ. ಅನುಭವದ ವ್ಯಾಪ್ತಿಗೆ ಬರದೇ ಇರುವುದನ್ನು ಚಿತ್ರಿಸುವುದು ಅಸಾಧ್ಯವಾಗಿ ಕತೆಗಳು ಇದ್ದಲ್ಲೇ ಸುತ್ತುತ್ತಿವೆ ಅನಿಸುತ್ತಿದ್ದರೂ ಎಲ್ಲಾ ಬರಹಗಾರರಿಗೂ ಇದು ಅನ್ವಯಿಸುವುದಿಲ್ಲ. ಕನ್ನಡ ಕಥಾಪ್ರಪಂಚಕ್ಕೆ ಹೊಸ ಅನುಭವಗಳು, ನಿರೂಪಣಾ ವಿಧಾನಗಳು, ಭಾಷೆಯ ಬಳಕೆಯಲ್ಲಿ ನಾವೀನ್ಯತೆ ಸೇರ್ಪಡೆಯಾಗುತ್ತಲೇ ಇವೆ. ಕನ್ನಡಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಲೇ ಇವೆ. ವಸ್ತುವಿನ ಆಯ್ಕೆಯಲ್ಲಿ ಮಡಿವಂತಿಕೆಯನ್ನು ಬದಿಗಿಟ್ಟು ಅನುಭವಕ್ಕೆ ಪ್ರಾಮಾಣಿಕರಾಗಿ ಬರೆಯುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವುದು ಮೆಚ್ಚಲೇಬೇಕಾದ ವಿಚಾರ. ಶತಮಾನದ ಹಿಂದಿನ ಕನ್ನಡ ಕತೆಗಳಿಗೂ, ಈ ಕಾಲಮಾನದ ಕತೆಗಳಿಗೂ ಇರುವ ವ್ಯತ್ಯಾಸ ಕೂಡಾ ಇದೇ. 'ಕತೆಗಳೆಂದರೆ ಹೀಗಿರಬೇಕು, ಇಂತಾದ್ದೊಂದು ನೀತಿ ಇರಬೇಕು' ಎನ್ನುವ ಚೌಕಟ್ಟನ್ನು ತಮಗೆ ತಾವೇ ವಿಧಿಸಿಕೊಂಡು ಬರೆಯುತ್ತಿದ್ದ ಅನೇಕ ಹಳಬರಿಗಿಂತಾ ಈ ತಲೆಮಾರಿನ ಕತೆಗಾರರು ಹೆಚ್ಚು ಕ್ರಾಂತಿಕಾರಿಗಳಾಗಿದ್ದಾರೆ. ಹೇಳಬೇಕಾದ್ದನ್ನು ಎಗ್ಗಿಲ್ಲದೆ ಹೇಳುವ ಪ್ರವೃತ್ತಿ ಮೈಗೂಡಿಸಿಕೊಂಡಿದ್ದಾರೆ. 'ಅಂತರಂಗದ